

# ಬನವಾಸಿ ವೆಂಕಟೇಶ ದೀಕ್ಷಿತ್

ಉತ್ತರ ಕನ್ನಡ ಜಿಲ್ಲೆಯ ಬನವಾಸಿಯ ಈ ಲೇಖಕ ಪ್ರಕಟಿಸಿದ್ದು 'ಕಾವಡಿ' ಎಂಬ ಒಂದೇ ಸಂಕಲನವನ್ನು. ಆದರೆ, ಪತ್ರಿಕೆಗಳಲ್ಲಿ ಇದುವರೆಗೆ 150ಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದ್ದಾರೆ.

ಬೆಂಗಳೆಯಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿ ಶಿರಸಿಯಲ್ಲಿ ವಿಜ್ಞಾನ ಪದವಿ ಪಡೆದು ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಗುಲ್ಬರ್ಗದಲ್ಲಿ ವೃತ್ತಿ ಆರಂಭ. ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರ, ದಿಲ್ಲಿ, ನಾಗಪುರ ಹೀಗೆ ಉತ್ತರ ಭಾರತದಲ್ಲಿ ಸೇವೆ ಸಲ್ಲಿಸಿದ್ದಾರೆ. ನಂತರ ಟೆಲಿಕಮ್ಯುನಿಕೇಷನ್ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇರಿ ಮುಂಬಯಿ, ಬೆಂಗಳೂರು, ಕೋಲಾರಗಳಲ್ಲಿ ಕೆಲಸ ಮಾಡಿ, ಮುಖ್ಯ ಲೇಖಾಧಿಕಾರಿಯಾಗಿ ಉಪ ಮಹಾಪ್ರಬಂಧಕರ ವೇತನ ಶ್ರೇಣಿಯಲ್ಲಿ ನಿವೃತ್ತರಾಗಿ, ಸದ್ಯ ಬೆಂಗಳೂರಲ್ಲಿ ವಾಸವಾಗಿದ್ದಾರೆ. ಕನ್ನಡದ ಪ್ರಮುಖ ನಿಯತಕಾಲಿಕಗಳಲ್ಲಿ ಕಥೆಗಳು ಪ್ರಕಟವಾಗಿವೆ.

'ನಕ್ಷತ್ರ ನುಂಗುವ ಸಮಯ' ಅವರ ಮೊದಲ ಧಾರಾವಾಹಿ.

ತೊಡೆಯಮೇಲಿಟ್ಟುಕೊಂಡು ಕುಳಿತರು.

'ನಾನು ಚಿಕ್ಕವನಿದ್ದಾಗಿಂದ ನೋಡಿದೇನೆ, ಈ ಮನೆ ಯಾವ ಗೋಡೆನೂ ಯಾವ ಮರಮಟ್ಟನ್ನೂ ಯಾರೂ ಮುಟ್ಟಿಲ್ಲ. ಹೋದ ಚಳಿಗಾಲದಲ್ಲಿ, ನಮ್ಮ ಅಡುಗೆಮನೆಗೆ ತಾಗಿ ಹಣ್ಣು ತರಕಾರಿ ಸರಿಯೊ ಒಂದು ಕೋಣೆಯಿತ್ತಲ್ಲ, ಅದ್ನ ಸೇರ್ಸಿಬಿಟ್ಟರೆ ಅಲ್ಲೆ ಊಟಕ್ಕೆ ಉಪಯೋಗಿಸಬಹುದು ಅಂತ ಬಕುಲಾ ಸಲಹೆ ಕೊಟ್ಳು. ನಾಕಡಿಯೆತ್ತರದ ಮೋಟುಗೋಡೆ. ಹೇಗೂ ಮಣ್ಣಿಂದು; ನಾವೇ ಸಾಕು ಅಂತಾ ಆನಂದ ಮತ್ತೆ ಅಡುಗೆ ದೇವಣ್ಣ ಸೇರಿ ಮೇಲಿನ ಕಚ್ಚುಹಲಗೆ ಎಬ್ಬಿಸಿ ಪಿಕ್ಕಾಸಿಯಿಂದ ಅಗೆಯೋಕೆ ಶುರು ಮಾಡಿದಾರೆ. ಮಣ್ಣಿಂದಾದ್ರು ಅದೇನು ಈ ಕಾಲದ ಇಟ್ಟಿಗೆಗಿಂತ ಗಟ್ಟಿಯಿತ್ತು. ಅಂತು ಅರ್ಧ ಕೆಡಗಿದ್ರು, ಒಂದು ಮಣ್ಣು ತುಂಬಿದ ಕುಡಿಕೆ ಚೂರು ಬಿದ್ದು ನನ್ನ ಕಾಲ ಕಡೆ ಉರುಳಿಕೊಂಡು ಬಂತು. ಪೂರ್ತಿ ಗೋಡೆ ತೆಗೆಯೋದಕ್ಕೆ ಬರೋಬರಿ ಅರ್ಧ ದಿವಸಾನೇ ಹಿಡತ್ತು. ಆ ಕಾಲದ್ದು ಕೆಲ್ಸ; ಸುಮ್ನೇ ಅಲ್ಲ' ಮಾತು ನಿಲ್ಲಿಸಿದವರು ಮನೆಯಲ್ಲೆಲ್ಲ ಅಭಿಮಾನದಿಂದ ಒಮ್ಮೆ ಕಣ್ಣು ಹರಿಸಿದರು. 'ಕುಡಿಕೆ ಚೂರಿಗೆ ಏನೋ ಲೋಹದ ಚೂರು ಅಂಟಿಕೊಂಡ್ಹಾಗೆ ಅನಿಸಿದ್ದಕ್ಕೆ ಅದನ್ನ ಎತ್ತಿಕೊಂಡೆ. ಅದ್ರಲ್ಲಿ ಕಂಚಿನದು ಕೆಲವು, ಹಳೇದು ಬಂಗಾರದ್ದು ಎರಡು ಸಿಕ್ಕಿದುವು.' ಗಂಟಿಂದ ನಾಕಾರು ವಸ್ತುಗಳನ್ನು ಆರಿಸಿ ಎದುರಿನ ಟೀಪಾಯಿ ಮೇಲಿಟ್ಟರು.

ಪಾಂಡುರಂಗ ಶಾಂತಾರಾಮ ಅವನ್ನು ಕಾತರದಿಂದ ಎತ್ತಿಕೊಂಡರು. ತಾಮ್ರದ ನಾಣ್ಯದ ಮೇಲೆ ಬಸವ ಮತ್ತು ಅಂಕುಶದಂತೆ ಕಾಣುವ ವಸ್ತುವಿನ ಚಿತ್ತಾರವಿತ್ತು. ಚಿನ್ನದ ನಾಣ್ಯದ ಮೇಲೆ ಸಿಂಹದ ಮೂಗುಬಾಯಿಯೋ ಅಥವ ಸೂರ್ಯನೋ ಅನಿಸುವ ಮುದ್ರೆಯಿತ್ತು. ಮೌನವಾವರಿಸಿತು. ಇಬ್ಬರೂ ಮಕ್ಕಳು ಅವನ್ನೆಲ್ಲ ಪರೀಕ್ಷಿಸುತ್ತ ಯಾವುದೋ ಆಲೋಚನೆಯಲ್ಲಿ ಮುಳುಗಿದರು.

'ಅಪ್ಪಾ, ಈ ಮನೆ ಪೂರ್ತಿ ಮಣ್ಣಿಂದ ಕಟ್ಟಿದ್ದ?' ಪಾಂಡುರಂಗ ಕೇಳಿದ.

'ನಿಸ್ಸಂದೇಹ. ಸಾವಿರದ್ದೈನೂರು ವರ್ಷಕ್ಕಿಂತ ಹಳೇದು ಈ ಗೋಡೆಯೆಲ್ಲ. ತಲೆಮಾರಿಂದ ಈ ಮಾಹಿತಿ ಒಬ್ರಿಂದೊಬ್ರಿಗೆ ಹರಿತಾ ಬಂದಿದೆ. ಆ ಕಾಲದಲ್ಲಿ ಏನೇನೆಲ್ಲ ಬೆರಸಿ ಮಣ್ಣು ಹದ ಮಾಡತಿದ್ರೋ. ಕಲ್ಲಿಗಿಂತ ಗಟ್ಟಿಯಿರತದೆ ಕಟ್ಟಿದ್ದು.'

'ಎಲ್ಲಾ ಗೋಡೆಗಳು ಮೂರಡಿಗಿಂತ ದಪ್ಪಗಿವೆಯೇನೋ...' ಶಾಂತಾರಾಮ ಎರಡೂ ಕೈಗಳಲ್ಲಿ ಯಾವುದೋ ಆಕಾರವನ್ನು ಕಲ್ಪಿಸಿಕೊಳ್ಳತೊಡಗಿದ. ಆಮೇಲೆ 'ನಾವೇನೋ ಆಡುವುದು ಓದುವುದು ಇದರಲ್ಲೇ ಕಳೆದುಬಿಟ್ಟೆವು. ನಂತ್ರ ಉದ್ಯೋಗ ಹಿಡದು ಹೊರಗೇ ಹೋಗಿಬಿಟ್ಟೆವು. ಮನೇಲಿ ನೋಡೋದು ಬಹಳಾ ಇದೆ ಅನಿಸ್ತಿದೆ...' ಊಹೆಯಲ್ಲಿ ಕಳೆದುಹೋಗುವಂತಿದ್ದ ಮಗನನ್ನು ನೋಡಿ ದೇಶ್ವಂತರಿಗೆ ಏನೋ ಅನ್ನಿಸಿ 'ಆಗೆಲ್ಲ ಕಬ್ಬಿಣ ಸಿಮೆಂಟೆಲ್ಲಿತ್ತು? ಎಲ್ಲಾ ಮಣ್ಣಿಂದೆ.' ಯೋಚನೆಯ ದಿಕ್ಕು ಬದಲಿಸಯತ್ನಿಸಿದರು.

'...ಅಪ್ಪಾ, ದೇಶ್ವಂತ ಅಂದರೇನಿದು? ಸಾಮಂತ ಅಥವಾ ಪಾಳೆಯಗಾರಿಕೆಗೆ ಸಂಬಂಧಿಸಿದ್ದ? ಶಕ್ತಿಶಾಲಿಗಳಾಗಿದ್ರ ಹಿಂದಿನವರು?' ಹಿರಿಯವ ಕೇಳಿದ. 'ಅದು, 'ದೇಶಾಮಾತ್ಯ' ಅನ್ನೋ ಶಬ್ದ. ಆಡುಗರ ಬಾಯಲ್ಲಿ ದೇಶ್ವಂತ ಆಯ್ತು. ದೇಶಾಮಾತ್ಯ ಕದಂಬ ರಾಜರ ಕಾಲದಲ್ಲಿ ರಾಜವೈದ್ಯರಿಗಿದ್ದ ಪದವಿ. ನಮ್ಮ ವಂಶದವರು ಪ್ರಖ್ಯಾತ ರಾಜವೈದ್ಯರು. ರಾಜರ ಆಸ್ಥಾನದಲ್ಲಿ ಅನೇಕ ಅಧಿಕಾರಿಗಳಿರತಿದ್ರು. ಪ್ರಧಾನ ಅಂದ್ರೆ ಪ್ರಧಾನಮಂತ್ರಿ, ತಂತ್ರಪಾಲ ಅಂದ್ರೆ ಸೆಕ್ರೆಟರಿ. ಹಾಗೇ ದೇಶಾಮಾತ್ಯ. ಕದಂಬರ ಆಳ್ವಿಕೇಲಿ ಎಲ್ಲೆಲ್ಲಿಂದ್ಲೋ ಜನ ಬಂದು ಇಲ್ಲಿ ನೆಲೆನಿಂತ್ರು. ನಮ್ಮ ಮೂಲ ನರ್ಮದಾ ತೀರದ ಪೈಠಣವಾಗಿತ್ತು ಅಂತ ಹಿರಿಯರು ಒಮ್ಮೆ ಹೇಳಿದ್ದು ನೆನಪಿದೆ.'

'ನಮ್ಮ ವಂಶದವರ್ಯಾರೋ ಪೈಠಣಕರ್ ಅಂತ ಇಂಗ್ಲೆಂಡಿನಲ್ಲಿ ನೆಲಸಿದಾರೆ ಅಂತಿದ್ರಿ.' 'ಹೌದು. ಆದ್ರೆ ಅದೂ ನಮ್ಮ ಮೂಲ ಉಪಾಧಿಯಲ್ಲ. ಪೈಠಣದಿಂದ ಹೋದ್ಮೇಲೆ ಅವರು ಪೈಠಣಕರ್ ಆಗಿರ್ಬಹುದು. ಪೈಠಣದ ಹೆಸರೆ ಹಿಂದೆ ಪ್ರಥಮಪುರ ಅಂತಿತ್ತು ಅಂತಾರೆ. ಬಿಡು ನಮ್ಮ ಪೂರ್ವಜರು ಈ ಜಾಗದಲ್ಲಿ ನೆಲಸಿದ್ದು ಏನಿಲ್ಲ ಅಂದ್ರು ಸಾವಿರ ವರ್ಷಕ್ಕೂ ಮೊದಲು.'

'ರಾಜಾಶ್ರಯ ಅಂದ್ರೆ ನಾವು ಊರೊಳಗಿರ್ಬೇಕಿತ್ತು. ಇದು ಹೊರಗಾಯ್ತು.'

'ವೈದ್ಯರಾಗಿದ್ದಕ್ಕೆ ಔಷಧ ಗಿಡಮೂಲಿಕೆಗಳು ಬೇಕು. ಅದನ್ನ ಬೆಳಸಿಕೊಳ್ಳಲಿಕ್ಕೆ ಎಕರೆಗಟ್ಲೆ ಜಾಗ ಬೇಕು. ರಾಜಾಡಳಿತ ಅದನ್ನ ಇಲ್ಲಿ ಇನಾಮು ಹಾಕಿ ಕೊಟ್ಟಿತು. ಇಲ್ಲಿ ನೆಲೆಸಿದ್ರು. ಕುದುರೆಗಳು, ಕುದುರೆಗಾಡಿಗಳು ಇದ್ದಿದ್ದಕ್ಕೆ ಕುರುಹುಗಳು ಇನ್ನೂ ಮೇಲಿನ ಮಹಡೀಲಿವೆ. ನಂತರದ ರಾಜಮನೆತನಗಳೂ ಭತ್ತ ಬೆಳೆಯೋ ಜಾಗವನ್ನು ಇನಾಮು ಹಾಕಿಕೊಟ್ಟ ತಾಮ್ರಪತ್ರದಿಂದ ಇದನ್ನ ಊಹಿಸಬಹುದು. ನಿನ್ನಜ್ಜ ಸಹ ಆಯುರ್ವೇದ ವೈದ್ಯರಾಗಿದ್ರು ಗೊತ್ತಾ?'

ಪಾಂಡುರಂಗ ಏನನ್ನೋ ಯೋಚಿಸುತ್ತಿದ್ದ. 'ನಮ್ಮ ವಂಶಸ್ಥರು ಬಹಳ ಗಳಿಸಿರಬೇಕು ಹಾಗಿದ್ರೆ...'

ದೇಶ್ವಂತರಿಗೆ ಆಗಿಂದ ಮಗನ ಆಲೋಚನೆಯ ಧಾಟಿ ಸಣ್ಣಕೆ ಆತಂಕ ಮೂಡಿಸುತ್ತಿತ್ತು. 'ನೋಡು ಪಾಂಡುರಂಗ, ರಾಜಾಶ್ರಯ ಅಂದ್ರೆ ಸರ್ಪ ಸಹವಾಸ ಇದ್ಹಾಗೆ. ಕೊಡುಗೈ ಪ್ರಸನ್ನತೆಯಲ್ಲಿ. ಹಾಗೇ ಸಂದೇಹ ಬಂದು ಮನಸು ಕೆಟ್ಟರೂ ಸಾಕು, ತಪ್ಪು ಕಲ್ಪನೆಯಾದ್ರು ಸಾಕು; ಹೆಡೆಯಪ್ಪಳಿಸಲು ಕ್ಷಣವು ಬೇಕಾಗಿಲ್ಲ. ಈಗಿನಂತೆ ಅಲ್ಲ; ರಾಜನ ಮಾತು ಕೊನೆಯ ತೀರ್ಪು. ನೂರಾರು ಎಕರೆಯಷ್ಟು ಜಮೀನು ನನ್ನಜ್ಜನ ಕಾಲದಲ್ಲೂ ಇತ್ತು. ಅದಲ್ದೇ ಇನಾಮು ಜಮೀನು, ರಾಜರು ಕೊಡುವ ಬಹುಮಾನ ಮುಂತಾದ್ದೆಲ್ಲ ಇದ್ದರೂ ಅಂತಸ್ತಿಗೆ ತಕ್ಕ ಕರ್ಚೂ ಇದ್ದೀತು. ಔಷಧ ಕೊಟ್ಟೆಲ್ಲಾ ಆಗ ಗಳಿಸಲು ಅವಕಾಶವಿತ್ತೋ ನನಗೆ ಗೊತ್ತಿಲ್ಲ.'

'ಪಾಂಡ್ರಂಗಣ್ಣ, ನೀನು ಮುಂಬಯಿಯಲ್ಲಿ ಬಿಸಿನೆಸ್ ಶುರುಮಾಡುವಾಗ ಹತ್ತೆಕರೆ ಗದ್ದೆ ಮಾರಿದ್ರು ಅಂತ ನೆನಪು' ಶಾಂತಾರಾಮ ಹೇಳಿದ.

ಪಾಂಡುರಂಗ ತಮ್ಮನ ಮುಖ ನೋಡಿದ. ಈಗ ಚಿಕ್ಕ ಮಾತೂ ಎಲ್ಲಿಗೋ ಒಯ್ಯಬಹುದು ಅನಿಸಿ ದೇಶ್ವಂತರು ಬಾಯಿ ಹಾಕಿದರು. 'ನಂಗೆ ಅದೇ ಸಮಾಧಾನ ನೋಡು. ವ್ಯಾಪಾರ ಒಳ್ಳೇದಾಗಿದ್ಯಂತೆ. ವಾಮನ ಇಂಗ್ಲೆಂಡಲ್ಲಿ ಗಟ್ಟಿಯಾಗಿದಾನೆ. ಆನಂದ ಇಲ್ಲಿ ಚೆಂದಾಗಿ ನೋಡಿಕೊಂಡು ಹೋಗ್ತಿದಾನೆ. ನೀವೆಲ್ಲ ಎಲ್ಲೆಲ್ಲಿದೀರೊ ಅಲ್ಲಿ ಚಂದಾಗಿದೀರ. ನಂಗೆ ಅದೇ ನಿಶ್ಚಿಂತೆ.'

ಸದ್ಯ ಕಿಡಿ ಹಾರಲಿಲ್ಲ ಅಂತ ನಿಟ್ಟುಸಿರು ಬಿಟ್ಟರು.

(ಮುಂದುವರಿಯುವುದು)

ಪ್ರತಿಕ್ರಿಯಿಸಿ: **feedback@sudha.co.in**